**ಕರ್ನಾಟಕ ಸರ್ಕಾರ**
**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಕಾಶಿಇ:16:ಅಉಗೌಧ:ಆಯವ್ಯಯ:2018-19

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:06.02.2019.

**ಸುತ್ತೋಲೆ**

**ವಿಷಯ:** 2018-19ನೇ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸಿರುವ ಅತಿಥಿ ಉಪನ್ಯಾಸಕರುಗಳ ಗೌರವಧನದ ಮಾಹೆವಾರು ಮಾಹಿತಿ ಒದಗಿಸುವ ಕುರಿತು.

**ಉಲ್ಲೇಖ:** 1. ಸರ್ಕಾರದ ಆದೇಶ ಸಂಖ್ಯೆ:ಇಡಿ/110/ಹೆಚ್‌ಪಿಸಿ/2018, ದಿನಾಂಕ:05.01.2019.
2. ಈ ಕಛೇರಿಯ ಅನುದಾನ ಬಿಡುಗಡೆ ಸಮಸಂಖ್ಯೆ ಪತ್ರ ದಿನಾಂಕ:11.01.2019.

* * * *

2018-19ನೇ ಶೈಕ್ಷಣಿಕ ಸಾಲಿನಲ್ಲಿ ಈ ಕಛೇರಿ ವ್ಯಾಪ್ತಿಯಡಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸಿರುವ ಅತಿಥಿ ಉಪನ್ಯಾಸಕರುಗಳ ಗೌರವಧನವನ್ನು ಉಲ್ಲೇಖಿತ ಪತ್ರ (2)ರ ಪ್ರಕಾರ ಸೆಪ್ಟೆಂಬರ್ -2018, ಅಕ್ಟೋಬರ್ -2018 ಮತ್ತು ನವೆಂಬರ್ 2018ರ ಭಾಗಶ: ಒಟ್ಟು ಮೊತ್ತ ರೂ.22,33,35,846/- ಗಳನ್ನು ಕಾಲೇಜುವಾರು ಖಜಾನೆ-2ರಲ್ಲಿ ಈಗಾಗಲೇ ಗೌರವಧನವನ್ನು ಬಿಡುಗಡೆಗೊಳಿಸಲಾಗಿದ್ದು, ಸದರಿ ಅನುದಾನಕ್ಕೆ ಸಂಬಂಧಿಸಿದಂತೆ ಕಾಲೇಜುಗಳ ಹಂತದಲ್ಲಿ ವೆಚ್ಚ ಮಾಡಿ ಸದರಿ ಅನುದಾನದ ವೆಚ್ಚಕ್ಕೆ ಸಂಬಂಧಪಟ್ಟ ಬಳಕೆ ಪ್ರಮಾಣ ಪತ್ರಗಳನ್ನು (ಖಜಾನೆ-2ರ ಪಟ್ಟಿ) ಆಯಾ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗೆ ದಿನಾಂಕ: 11.02.2019ರೊಳಗೆ ಸಲ್ಲಿಸುವಂತೆ ಸೂಚಿಸಿದೆ. ಆದುದರಿಂದ ಕಾಲೇಜುಗಳ ಹಂತದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ವೆಚ್ಚಮಾಡದೇ ಇದ್ದಲ್ಲಿ ಪ್ರಾಂಶುಪಾಲರುಗಳ ವಿರುದ್ಧ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.

ಮುಂದುವರೆದು, ಕಾಲೇಜುವಾರು ಬಳಕೆ ಪ್ರಮಾಣ ಪತ್ರಗಳನ್ನು (ಖಜಾನೆ-2ರ ಪಟ್ಟಿ) ಕ್ರೋಢೀಕರಿಸಿ ಜಂಟಿ ನಿರ್ದೇಶಕರ ದೃಢೀಕರಣದೊಂದಿಗೆ ದಿನಾಂಕ:13.02.2019ರೊಳಗಾಗಿ ಈ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸುವಂತೆ 06 ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ಸೂಚಿಸಲಾಗಿದೆ.

ಅಡಕ: ಅನುದಾನ ಬಿಡುಗಡೆ ಆದೇಶಪ್ರತಿಗಳು

**ಕಾಲೇಜು ಶಿಕ್ಷಣ ನಿರ್ದೇಶಕರು**

ಇವರಿಗೆ,

1. ಜಂಟಿನಿರ್ದೇಶಕರು, ಕಾ.ಶಿ.ಇ, ಪ್ರಾದೇಶಿಕಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಕಲಬುರುಗಿ – ತಮ್ಮ ಕಛೇರಿವ್ಯಾಪ್ತಿಯಡಿಯಲ್ಲಿ ಬರುವ ಸ.ಪ್ರ.ದ.ಕಾಲೇಜುಗಳಲ್ಲಿ ಅನುದಾನ ವೆಚ್ಚ ಕುರಿತು ಅಗತ್ಯಕ್ರಮವಹಿಸುವುದು.
2. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3. ಮಾಹಿತಿಗಾಗಿ.ಮಾಹಿತಿ ತಂತ್ರಜ್ಞಾನ ವಿಭಾಗ.
4. ಕಛೇರಿ ಪ್ರತಿ.